**ದಿನಾಂಕ 25.03.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಡಿ.ಜಿ. ವಕೀಲರಿಂದಃ**

1. ನಾನು ಬಿ.ಇ ಪದವೀಧರೆ. 2017 ರಲ್ಲಿ ನನ್ನ ಬಿ.ಇ ಪದವಿಯನ್ನು ಮುಗಿಸಿರುತ್ತೇನೆ. ಅದಾದನಂತರ ನಾನು ಕೂಡಲೇ ಕೆಲಸಕ್ಕೆ ಸೇರಿದ್ದೇನೆ. ನನ್ನ ತಂದೆಗೆ ಹುಷಾರಿಲ್ಲದೇ ಇರುವ ಕಾರಣ ಹಾಗೂ ಮನೆಯಲ್ಲಿ ಯಾರೂ ನೋಡಿಕೊಳ್ಳುವವರು ಇಲ್ಲದೇ ಇರುವ ಕಾರಣ ಹಾಗೂ ನನ್ನ ತಂಗಿಗೆ ವಿದ್ಯಾಭ್ಯಾಸ ಕೊಡಿಸುವ ಸಲುವಾಗಿ ನಾನು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಪಂಜಿಗನಹಳ್ಳಿಯ ಸೈಟು ನನ್ನ ತಾಯಿಯ ಹೆಸರಿಗೆ ಇದೆ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 2 ರ ಆಸ್ತಿಯು ತಾಯಿಯ ಹೆಸರಿಗೆ ಇದೆ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರಿನಲ್ಲಿ ಸುಮಾರು ಆಸ್ತಿಗಳು ಇದ್ದರೂ ಸಹ ನನ್ನ ತಂದೆ ಎಲ್ಲವನ್ನು ಮಾರಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಮೋಸ ಮಾಡಿಸಿಕೊಂಡು ಆಸ್ತಿಯನ್ನು ಬರೆಸಿಕೊಂಡಿರುತ್ತಾರೆ ಎಂದು ನಾನು ಹೇಳಿದ್ದೇನೆ ಎಂದು ನುಡಿಯುತ್ತಾರೆ.

2. ನಿ.ಪಿ.18 ರ ದಾಖಲಾತಿಯು ನನ್ನ ತಂದೆಗೆ ಸಂಬಂಧಪಟ್ಟ ವೇತನ ಪ್ರಮಾಣ ಪತ್ರವಾಗಿದ್ದು ಅದರಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಯಾವುದೇ ಸಹಿ ಮತ್ತು ಸೀಲು ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಕೇಳಿರುತ್ತೇನೆ, ಆದರೆ ಅವರು ಹಾಕುವುದಿಲ್ಲ ಎಂದು ನುಡಿಯುತ್ತಾರೆ. ಡಿಸೆಂಬರ್ 2023 ರಂದು ಸದರಿ ದಾಖಲಾತಿಯನ್ನು ಪಡೆದಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನನ್ನ ತಂಗಿಯ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಎಂದು ಪಡೆದಿದ್ದೇನೆ ಎಂದರೆ ಸಾಕ್ಷಿಯು ಅವರು ನ್ಯಾಯಾಲಯದ ಕಲಾಪಕ್ಕೆ ಎಂದರೆ ಕೊಡುವುದಿಲ್ಲ ಎಂದು ಹೇಳಿದ ಕಾರಣ ನನ್ನ ತಂಗಿಯ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಎಂದು ಕೇಳಿ ತೆಗೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಾನು ನನ್ನ ತಂಗಿಯ ಹೆಚ್ಚಿನ ವ್ಯಾಸಾಂಗಕ್ಕಾಗಿ ಸದರಿ ದಾಖಲಾತಿಯಲ್ಲಿ ನನ್ನ ತಂದೆಗೆ ಕಡಿಮೆ ಸಂಬಳ ಎಂದು ತೋರಿಸಿ ಹಾಕಿಸಿಕೊಂಡು ಬಂದಿದ್ದೇನೆ ಎಂದರೆ ಸಾಕ್ಷಿಯು ನ್ಯಾಯಾಲಯದ ಮುಖಾಂತರವೇ ಕಂಪನಿಯವರಿಗೆ ವೇತನ ಪ್ರಮಾಣ ಪತ್ರ ಹಾಜರುಪಡಿಸಲು ನಿರ್ದೇಶಿಸಿದ್ದಲ್ಲಿ, ನನ್ನ ತಂದೆಯ ನಿಜವಾದ ವೇತನ ಪ್ರಮಾಣ ಪತ್ರ

ತಿಳಿಯುತ್ತದೆ ಎಂದು ನುಡಿಯುತ್ತಾರೆ. ವೇತನ ಪ್ರಮಾಣ ಪತ್ರವನ್ನು ಪ್ರತ್ಯೇಕವಾಗಿ ನೀಡುತ್ತಾರೆ, ನಾನು ಪತ್ರದ ಮುಖಾಂತರ ಪಡೆದಿದ್ದೇನೆ ಎಂದರೆ ಸಾಕ್ಷಿಯು ಕಂಪನಿಯಲ್ಲಿ ಅದೇ ರೀತಿ ಕೊಡುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ನಾನು ಸುಳ್ಳು ದಾಖಲಾತಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆ ಶ್ರೀದೇವಿ ಪಾಲಿಟೆಕ್ನಿಕ್ ನಲ್ಲಿ ಕೆಲಸ ಮಾಡುತ್ತಿದ್ದು, ಒಂದು ತಿಂಗಳಿಗೆ ರೂ. 10000/- ಪಡೆಯುತ್ತಾರೆ ಎಂದು ತೋರಿಸಲಾಗಿದೆ ಎಂದರೆ ಸರಿ. ನಿ.ಪಿ.19 ರಲ್ಲಿ ಅದು ಕೇವಲ 5 ದಿನದ ಸಂಬಳ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಅದು ಲಾಸ್ಟ್ ಪೇ ಆಗಿದೆ ಎಂದು ನುಡಿಯುತ್ತಾರೆ. ಅದು 5 ದಿನಕ್ಕೆ 10 ಸಾವಿರ ಆದರೆ, ನನ್ನ ತಂದೆಗೆ ಒಂದು ತಿಂಗಳಿಗೆ 60 ಸಾವಿರ ಮೇಲ್ಪಟ್ಟು ಬರುತ್ತಿತ್ತು ಎಂದರೆ ಸರಿಯಲ್ಲ. ನಿ.ಪಿ.21 ರಲ್ಲಿ ಕೊಳವೆ ಬಾವಿಯನ್ನು ಪಹಣಿಯಲ್ಲಿ ನಮೂದು ಮಾಡಿಕೊಡಿ ಎಂದು ದಾಖಲಾತಿಯನ್ನು ಕೊಟ್ಟಿದ್ದೇನೆ ಎಂದರೆ ಸರಿ. ಕೇಸು ನಡೆಯುವ ಸಮಯದಲ್ಲಿ ಸದರಿ ದಾಖಲಾತಿಯನ್ನು ಪಡೆದಿದ್ದೇನೆ ಎಂದರೆ ಸರಿ. ಆದರೆ ಬೋರ್ ನ್ನು 2 ನೇ ಪ್ರತಿವಾದಿ ಅಶೋಕ್ ಕುಮಾರ್ ತೆಗೆಸಿದ್ದರು ಎಂದರೆ ಸರಿಯಲ್ಲ, ನನ್ನ ತಂದೆ ಸುಮಾರು 20 ವರ್ಷದ ಮೇಲೆಯೇ ಬೋರ್ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಅದರ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಸದರಿ ಬೋರ್ ನ್ನು ಇತ್ತೀಚೆಗೆ 2 ನೇ ಪ್ರತಿವಾದಿಯೇ ತೆಗೆಸಿದ್ದಾರೆ ಎಂದು ನುಡಿಯುತ್ತಾರೆ.

4. 2016 ರಿಂದ ನನ್ನ ತಂದೆ ನಾವೆಲ್ಲರೂ ನೋಡಿಕೊಳ್ಳಲು ನಿರ್ಲಕ್ಷ ತೋರಿದ ಕಾರಣ ಅವರ ತಮ್ಮನ ಮನೆಗೆ ಹೋಗಿದ್ದು, ಸಾಯುವವರೆಗೂ ಅವರ ತಮ್ಮನ ಜೊತೆಯಲ್ಲಿ ವಾಸಮಾಡಿದ್ದು, ಅವರ ತಮ್ಮನೇ ಎಲ್ಲವನ್ನೂ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, ಅವರನ್ನು ನಾವೇ ನೋಡಿಕೊಂಡು, ಅವರು ಸಾಯುವವರೆಗೂ ನಮ್ಮ ಜೊತೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಸಾಯುವ ಕಾಲಕ್ಕೆ ನಾವು ಕೋವಿಡ್ ಇದ್ದ ಕಾರಣ, ನಮ್ಮ ಊರಿನಲ್ಲಿ ಹೋಗಿ ಸೇರಿಕೊಂಡಿದ್ದು, ಅವರು ಊರಿನಲ್ಲಿಯೇ ಮೃತಪಟ್ಟಿರುತ್ತಾರೆ. ಕೇಸು ಹಾಕುವ ಕಾಲದಲ್ಲಿ ನನ್ನ ತಂದೆಯ ಆಧಾರ್ ಕಾರ್ಡ್ ನಲ್ಲಿ

ತೋರಿಸಿದ ವಿಳಾಸವನ್ನು ಕೊಟ್ಟಿದ್ದೇನೆ. ನನ್ನ ತಂದೆ ಪಿಟ್ಲಾಳಿಯಲ್ಲಿ ಇದ್ದರು ಎಂದರೆ ಸರಿಯಲ್ಲ, ಪಿಟ್ಲಾಳಿಯಲ್ಲಿ ನಮಗೆ ಯಾವುದೇ ವಾಸದ ಮನೆ ಇಲ್ಲ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ ನಲ್ಲಿ ತುಮಕೂರಿನ ವಿಳಾಸವಿದೆ ಎಂದರೆ ವಿದ್ಯಾಭ್ಯಾಸದ ಪರವಾಗಿ ನಾವು ಆ ರೀತಿ ತೋರಿಸಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆ ನಮ್ಮ ಜೊತೆ ಇಲ್ಲದ ಕಾರಣ ಅವರ ವಿಳಾಸ ಪಿಟ್ಲಾಳಿಯಲ್ಲಿ ತೋರಿಸಲಾಗಿದೆ ಎಂದರೆ ಸರಿಯಲ್ಲ, ಅವರು ಸಾಯುವವರೆಗೂ ನಮ್ಮ ಜೊತೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ.

5. ನನ್ನ ತಂದೆ ನಮ್ಮ ಜೊತೆ ವಾಸ ಮಾಡುತ್ತಿದ್ದಲ್ಲಿ ತುಮಕೂರಿನ ವಿಳಾಸವನ್ನು ಕೊಡುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆ ನನ್ನ ಜೊತೆ ವಾಸವಿರಲಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಾವೆ ಹಾಕಿದ ನಂತರ ಅವರೇ ಖುದ್ದು ಹಾಜರಾಗಿ ಪ್ರತಿವಾದ ಪತ್ರವನ್ನು ತಮ್ಮ ವಕೀಲರ ಮುಖಾಂತರ ಬರೆಸಿ ಹಾಕಿದ್ದಾರೆ ಎಂದರೆ ಸರಿಯಲ್ಲ ಅವರು ನ್ಯಾಯಾಲಯಕ್ಕೂ ಸಹ ಹಾಜರಿದ್ದು, ಪ್ರತಿವಾದ ಪತ್ರವನ್ನು ವಕೀಲರ ಮುಖಾಂತರ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ನನ್ನ ತಂದೆ ಪ್ರತಿಯೊಂದು ವಿಷಯಗಳನ್ನು ಏಕೆ ದಾನಪತ್ರವನ್ನು ಬರೆದಿರುವ ಬಗ್ಗೆ ತಿಳಿಸಿದ್ದಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯೇ ಮೋಸ ಮಾಡಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಎಲ್ಲಾ ವಿಷಯಗಳು ನನಗೆ ತಿಳಿದಿದ್ದರೂ ಸಹ ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಶ್ರೀ ಬಿ.ಎನ್.ಎ ವಕೀಲರು 5 ನೇ ಪ್ರತಿವಾದಿಯ ಪರ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**